**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ** 101/2019 **CW**-10 **PW**-7

**ಸಾಕ್ಷಿಯನ್ನು ದಿಃ 04.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಪುಟ್ಟರಾಜು |
| ತಂದೆಯ ಹೆಸರುಃ | ಚಿಕ್ಕೇಗೌಡ |
| ವಯಸ್ಸುಃ | 62 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಉದಯಪುರ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ಗೊತ್ತು. ಆರೋಪಿತರು ಗೊತ್ತು.

ಚಾಸಾ-1 ಮತ್ತು 1ನೇ ಆರೋಪಿಯ ನಡುವೆ 2012 ರಲ್ಲಿ ವಿವಾಹವಾಗಿದ್ದು 1 ವರ್ಷಗಳ ಕಾಲ ಅವರಿಬ್ಬರು ಚೆನ್ನಾಗಿದ್ದರು. ಮದುವೆ ಸಮಯದಲ್ಲಿ 150 ಗ್ರಾಂ ಚಿನ್ನ, ರೂ. 2,00,000/- ನಗದು ಹಣವನ್ನು ನೀಡಿರುತ್ತಾರೆ. ನಂತರ ಆರೋಪಿ ಚಾಸಾ-1 ರವರನ್ನು 2-3 ಬಾರಿ ಹೊಡೆದು ತವರು ಮನೆಗೆ ಓಡಿಸಿದ್ದರು. ಹೆಚ್ಚಿನ ವರದಕ್ಷಿಣೆಗಾಗಿ ಬೇಡಿಕೆ ಇಟ್ಟಿದ್ದರು. ನಾನು, ಚಾಸಾ-7 ರಿಂದ ಚಾಸಾ-9 ರವರು ಪಂಚಾಯತಿ ಮಾಡಿ ಅವರು ಕೇಳಿದ್ದ ಹೆಚ್ಚಿನ ವರದಕ್ಷಿಣೆ ನೀಡಲು ಮಾತನಾಡಿದ್ದೆವು. ಚಾಸಾ-1 ರವರ ತಂದೆ ಚಾಸಾ-4 ರವರಿಂದ ರೂ. 3,50,000/- ಹಣವನ್ನು ತೆಗೆದುಕೊಂಡು ಹೋಗಿದ್ದರು. ಒಂದು ವರ್ಷದ ನಂತರ ಗಲಾಟೆ ಮತ್ತೆ ಶುರುಮಾಡಿರುತ್ತಾರೆ. ನಂತರ ಹಣ ಬೇಕು ಎಂದು ಚಾಸಾ-1 ರವರನ್ನು ಹೊಡೆದು ಊರಿಗೆ ಕಳುಹಿಸಿದ್ದರು. ನಂತರ ಚಾಸಾ-1 ರವರು ಚನ್ನರಾಯಪಟ್ಟಣ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ.

ದಿಃ 07.12.2018 ರಂದು ಬೆಳಗ್ಗೆ 10.15 ರಿಂದ 11.15 ರವರೆಗೆ 1ನೇ ಆರೋಪಿತರ ಮನೆಯಲ್ಲಿ ಪೋಲೀಸರು ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತಾರೆ. ಅಗ ಚಾಸಾ-1 ರವರು ಹಾಜರಿದ್ದರು.

ಸಾಕ್ಷಿಗೆ ಸ್ಥಳ ಮಹಜರ್ ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ರಾಜೀ ಪಂಚಾಯತಿ ಮಾಡುವ ಸಮಯದಲ್ಲಿ ಎಲ್ಲಾ ಆರೋಪಿತರು ಹಾಜರಿದ್ದರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಜೆ ಡಿ ರವರಿಂದ ಃ**

ಚಾಸಾ-1 ರವರ ಊರಿಗೂ ನಮ್ಮ ಊರಿಗೂ 2-3 ಕಿ ಮೀ ಅಂತರವಿದೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಒಡವೆ ಮತ್ತು ಹಣವನ್ನು ನೀಡುವ ಸಮಯದಲ್ಲಿ ಹಾಜರು ಇರಲಿಲ್ಲ. 1ನೇ ಆರೋಪಿ ಚಾಸಾ-1 ರವರ ವಿರುದ್ಧ ದಾಂಪತ್ಯ ಪುನರ್ ಸ್ಥಾಪನೆ ಅರ್ಜಿ ಸಲ್ಲಿಸಿದ್ದ ಬಗ್ಗೆ ಗೊತ್ತಿಲ್ಲ. ಆರೋಪಿತರು ರೂ 3,50,000/- ಹಣವನ್ನು ಯಾವ ದಿನಾಂಕ ತೆಗೆದುಕೊಂಡು ಹೋದರು ಎಂದುಗೊತ್ತಿಲ್ಲ. ಯಾವ ದಿನಾಂಕಗಳಂದು ಮಾನಸಿಕ ಮತ್ತು ದೈಹಿಕ ಹಿಂಸೆಗಳನ್ನು 1ನೇ ಆರೋಪಿ ಚಾಸಾ-1 ರವರಿಗೆ ನೀಡಿದ್ದಾರೆ ಎಂದು ಗೊತ್ತಿಲ್ಲ. ನಾನು ಅದನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ನಾನು ದಿಃ 07.12.2018 ರಂದು ನನ್ನ ಹೇಳಿಕೆಯನ್ನು ಗುಂಡಶೆಟ್ಟಿಹಳ್ಳಿಯಲ್ಲಿ ನೀಡಿರುತ್ತೇನೆ. ನನ್ನ ಹೇಳಿಕೆಯನ್ನು ಪೋಲೀಸರು ಕೈಬರಹ ಮಾಡಿಕೊಂಡಿರುತ್ತಾರೆ. ಅದನ್ನು ಬಳಿಗ್ಗೆ 10.15 ರಿಂದ 11.15 ರಲ್ಲಿ ಬರೆದುಕೊಂಡಿರುತ್ತಾರೆ. ನನ್ನ ಹೇಳಿಕೆಯನ್ನು ಓದಿ ತಿಳಿದುಕೊಂಡಿದ್ದೇನೆ. ನನ್ನ ಹೇಳಿಕೆಯಲ್ಲಿ ಗುಂಡಶೆಟ್ಟಿಹಳ್ಳಿಯಲ್ಲಿ ನಾಗಣ್ಣ ಎಂದು ಆರೋಪಿತರು ಬರೆಸಿರುತ್ತಾರೆ. ಸದರಿ ಮನೆಯ ಚೆಕ್ಕುಬಂದಿ ಹೇಳಲಾಗುವುದಿಲ್ಲ. ಸದರಿ ಮನೆಯ ವರಾಂಡ, ಹಾಲ್ ಮತ್ತು ಬೆಡ್ ರೂಂ

ವಿಸ್ತೀರ್ಣ ಗೊತ್ತಿಲ್ಲ. ಸದರಿ ಮನೆಯ ಮುಖ್ಯ ಬಾಗಿಲು ಉತ್ತರ ದಿಕ್ಕಿಗೆ ಬರುತ್ತದೆ. ಸದರಿ ಮನೆ ತೋಟದ ಮನೆ. ಮನೆ ಒಳಗಡೆ ಏನಿತ್ತು ಎಂದು ಬರವಣಿಗೆ ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ನಾನು ಸ್ಥಳ ಮಹಜರ್ ಸಮಯದಲ್ಲಿ ಹಾಜರಿಲ್ಲ. ನಿಪಿ–2 ಕ್ಕೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ಆರೋಪಿತರು ಚಾಸಾ–1 ರವರಿಗೆ ಯಾವುದೇ ತೊಂದರೆ ನೀಡಿಲ್ಲ ಮತ್ತು ವರದಕ್ಷಿಣೆ ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

(**ಕುಸುಮ ವಿ.**)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**